ಕರ್ನಾಟಕ ಸರ್ಕಾರ
ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1
ದೂ.ಸಂ:22242943, ಫ್ಯಾಕ್ಸ್ :22271998, ಇ–ಮೇಲ್: jd_mms@yahoo.co.in

ಸಂಖ್ಯೆ:ಎಂ:1/ಅ.ದಾ/ಗೋದಿ.ಬಿ/03/2011–12/13 ದಿನಾಂಕ:19–09–2013

## ಜ್ಞಾಪನ

ವಿಷಯ: ಮಧ್ಯಾಹ್ನ ಉಪಹಾರ ಯೋಜನೆಯಡಿ ಗೋಧಿ ಬಳಕೆ ಮಾಡಿ ಮಕ್ಕಳಿಗೆ ಆಹಾರ ಸಿದ್ದಪಡಿಸುವ ಬಗ್ಗೆ.

ಉಲ್ಲೇಖ: 1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ :F.No.9-21/2013 MDM 2-1 Dated 11th June, 2013
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ :No.5-1/2013 Desk (MDM). Dated 26th August, 2013
.3. 2013–14ನೇ ಸಾಲಿನ ರಾಜ್ಯ ಮಟ್ಟದ ಚಾಲನಾ ಮತ್ತು ಪರಾಮರ್ಷ ಸಮಿತಿ ಸಭೆ ನಡಾವಳಿ ದಿನಾಂಕ :: 11/9/2013

* * * * *

ಪ್ರಸ್ತಾವನೆ :-

ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿಯಲ್ಲಿ 2012–13ನೇ ಸಾಲಿನಲ್ಲಿ ರಾಜ್ಯದಲ್ಲಿ ಅಕ್ಕಿ ಬಳಕೆ ಪ್ರಮಾಣವೂ ಸಹ ಕಡಿಮೆಯಾಗಿರುವ ಬಗ್ಗೆ ಕೇಂದ್ರ ಸರ್ಕಾರದ ಯೋಜನಾ ಅನುಮೋದನಾ ಪ್ರಾಧಿಕಾರವು ಅಕ್ಷೇಪಣೆ ವ್ಯಕ್ತಪಡಿಸಿರುತ್ತದೆ. ಈ ಬಗ್ಗೆ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಪರಿಶೀಲಿಸಲಾಗಿ ಪ್ರತಿ ದಿನ ಮಕ್ಕಳಿಗೆ ಒಂದೇ ರೀತಿಯ ಆಹಾರದಿಂದಾಗಿ ಏಕತಾನತೆ ಉಂಟಾಗುತ್ತಿರುವುದೆಂದು ಮಕ್ಕಳು ಬಿಸಿಯೂಟವನ್ನು ಕಡಿಮೆ ಸೇವಿಸುತ್ತಿರುವುದಾಗಿ ಶಾಲೆಗಳಿಗೆ ಭೇಟಿ ನೀಡಿದ ಅಧಿಕಾರಿಗಳು ತಿಳಿಸಿದ್ದು, ಮಕ್ಕಳೂ ಸಹ ಇದೇ ರೀತಿ ಅಭಿಪ್ರಾಯಿಸಿರುತ್ತಾರೆ.

ಕೇಂದ್ರ ಸರ್ಕಾರಕ್ಕೆ 2013–14ನೇ ಸಾಲಿನ ಕ್ರಿಯಾಯೋಜನೆ ಮತ್ತು ಆಯವ್ಯಯದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿ, ಉಲ್ಲೇಖ–1 ರಲ್ಲಿ ಕೇಂದ್ರ ಸರ್ಕಾರವು ಮಧ್ಯಾಹ್ನ ಉಪಹಾರ ಯೋಜನೆಯಡಿ ರಾಗಿ ಮತ್ತು ಗೋಧಿಯನ್ನು ಬಿಡುಗಡೆಗೊಳಿಸಲು ಅನುಮೋದನೆ ನೀಡಿತ್ತು. ಕೇಂದ್ರ ಸರ್ಕಾರವು 2013–14ನೇ ಮೊದಲನೇ ತ್ರೈಮಾಸಿಕಗಳಲ್ಲಿ ರಾಗಿ ಮತ್ತು ಗೋಧಿಯನ್ನು ಭೌತಿಕವಾಗಿ ಬಿಡುಗಡೆಗೊಳಿಸದೇ ಇರುವುದರಿಂದ ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಉಲ್ಲೇಖ–2 ರಲ್ಲಿ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕದ ಆಹಾರ ಧಾನ್ಯ ಹಂಚಿಕೆಯಲ್ಲಿ ಗೋಧಿಯನ್ನು ಬಿಡುಗಡೆಗೊಳಿಸಿರುತ್ತದೆ. ರಾಗಿಯನ್ನು ಕೋಲಾರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ, ಶಿವಮೊಗ್ಗ, ತುಮಕೂರು, ಚಾಮರಾಜನಗರ ಜಿಲ್ಲೆಗಳಿಗೆ ಹಂಚಿಕೆ ಮಾಡಲು ಕೋರಲಾಗಿ ಈ ಎಲ್ಲಾ ಜಿಲ್ಲೆಗಳಿಗೆ ಅಗತ್ಯವಿರುವಷ್ಟು ಪ್ರಮಾಣ ರಾಗಿ ದೊರೆಯದೇ ಇರುವ ಪ್ರಯುಕ್ತ, ಪ್ರಸ್ತುತ ಗೋದಿಯನ್ನು ಕೇಂದ್ರ ಸರ್ಕಾರವು ಹಂಚಿಕೆ ಮಾಡಿ ಬಿಡುಗಡೆಗೊಳಿಸಿರುತ್ತದೆ. ಅಲ್ಲದೆ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಿಗೆ ಅಕ್ಕಿಯ ಜೊತೆಯಲ್ಲಿ ಗೋದಿಯನ್ನು ಬಿಡುಗಡೆಗೊಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಮಕ್ಕಳಿಗೆ ನೀಡುವ ಆಹಾರದಲ್ಲಿ ವೈವಿಧ್ಯತೆ ತರುವ ಸಂಬಂಧ ರಾಜ್ಯ ಮಟ್ಟದ ಚಾಲನಾ ಮತ್ತು ಪರಾಮರ್ಶ ಸಭೆಯಲ್ಲಿ ಚರ್ಚಿಸಲಾಗಿ, ಮಕ್ಕಳಿಗೆ ಸ್ಥಳೀಯ ಆಹಾರ ಪದ್ದತಿಯನ್ವಯ ಕಿರು ಧಾನ್ಯಗಳಾದ ರಾಗಿ, ಜೋಳ, ಸಜ್ಜೆ, ನವಣೆಗಳಂತಹ ಧಾನ್ಯಗಳನ್ನು ಬಳಕೆ ಮಾಡಿ ಆಹಾರ ಸಿದ್ದಪಡಿಸಿ ಮಕ್ಕಳಿಗೆ ವಿತರಿಸಲು ತೀರ್ಮಾನಿಸಲಾಗಿದೆ.

ಉಲ್ಲೇಖಿತ ಪತ್ರ ಮತ್ತು ಸಭಾನಡುವಳಿಗಳನ್ವಯ ಮಧ್ಯಾಹ್ನದ ಬಿಸಿಯೂಟದಲ್ಲಿ ವೈವಿಧ್ಯತೆ ತರುವ ಸಂಬಂಧ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಹೊರತುಪಡಿಸಿ ಇತರೆ 27 ಜಿಲ್ಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟಕ್ಕೆ ಗೋದಿಯನ್ನು ಬಳಕೆ ಮಾಡುವ ಸಂಬಂಧ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ :-

ಮಧ್ಯಾಹ್ನ ಉಪಹಾರ ಯೋಜನೆಯಡಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ನೀಡುವ ಬಿಸಿಯೂಟದಲ್ಲಿ ಗೋದಿಯನ್ನು ಬಳಕೆ ಮಾಡಿ ಮಕ್ಕಳಿಗೆ ಆಹಾರವನ್ನು ಸಿದ್ದಪಡಿಸಿ ವಿತರಿಸಲು ಕ್ರಮ ಕೈಗೊಳ್ಳಲು ಆದೇಶಿಸಿದೆ.

ಗೋದಿ ಬಳಕೆ ಮಾಡಲು ಈ ಕೆಳಕಂಡಂತೆ ಸೂಚನೆಗಳನ್ನು ಅನುಸರಿಸಲು ತಿಳಿಸಿದೆ.

ಫಲಾನುಭವಿಗಳು :-

- ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಮದರಸ, ಸ್ಥಳೀಯ ಸಂಸ್ಥೆ ಮತ್ತು ಎನ್.ಸಿ.ಎಲ್.ಪಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿಯ ಮಕ್ಕಳು.

ವ್ಯವಸ್ಥಾಪನೆ :-

- 1 ರಿಂದ 10ನೇ ತರಗತಿಯ ಜಿಲ್ಲೆಯ ಫಲಾನುಭವಿಗಳ ಸಂಖ್ಯೆಯನ್ವಯ ಅಕ್ಕಿಯ ಬದಲು ಅದೇ ಪ್ರಮಾಣದಲ್ಲಿ ಗೋದಿಯನ್ನು 1-5 ನೇ ತರಗತಿಗೆ 100 ಗ್ರಾಂ, 6-8/9&10ನೇ ತರಗತಿಗಳಿಗೆ 150 ಗ್ರಾಂನಂತೆ ಹಂಚಿಕೆಯಾಗಿರುವ ದಾಸ್ತಾನಿನ್ವಯ ವಾರಕ್ಕೆ ಒಂದು ಅಥವಾ ಎರಡು ದಿನ ಗೋದಿಯನ್ನು ರಾಜ್ಯ ಮಟ್ಟದಲ್ಲಿ ಜಿಲ್ಲಾವಾರು ಹಂಚಿಕೆ ಮಾಡಿ ಎಫ್.ಸಿ.ಐ ಗೆ ದಾಸ್ತಾನು ಬಿಡುಗಡೆ ಆದೇಶ ಹೊರಡಿಸುವಂತೆ ಪ್ರಸ್ತಾವನೆ ಸಲ್ಲಿಸುವುದು.
- ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ಶಾಲಾವಾರು ಫಲಾನುಭವಿಗಳ ಆಧಾರದ ಮೇಲೆ ಹಂಚಿಕೆಯಾಗಿರುವ ದಾಸ್ತಾನಿನ್ವಯ ವಾರಕ್ಕೆ ಒಂದು ಅಥವಾ ಎರಡು ದಿನ ಗೋದಿಯನ್ನು 1-5 ನೇ ತರಗತಿಗೆ 100 ಗ್ರಾಂ, 6-8/9&10ನೇ ತರಗತಿಗಳಿಗೆ 150 ಗ್ರಾಂನಂತೆ ಹಂಚಿಕೆ ಮಾಡಿ ಬಿಡುಗಡೆಗೊಳಿಸುವುದು.
- ಪ್ರತಿ ತಿಂಗಳು ಶಾಲಾ ಮುಖ್ಯ ಶಿಕ್ಷಕರು ಫಲಾನುಭವಿಗಳ ಆಧಾರದ ಮೇಲೆ ಮತ್ತು ಶಾಲೆ ನಡೆಯುವ ದಿನಗಳನ್ನು ಲೆಕ್ಕಹಾಕಿ ವಾರಕ್ಕೆ ಒಂದು/ಎರಡು ದಿನ ಅಕ್ಕಿಯ ಬದಲು ಗೋಧಿಯ ಬೇಡಿಕೆಯನ್ನು ಸಲ್ಲಿಸುವುದು.
- ತಾಲ್ಲೂಕು ಹಂತದಲ್ಲಿ ದಾಸ್ತಾನಿನನ್ವಯ ಶಾಲೆಗಳಿಗೆ ವಾರಕ್ಕೆ ಒಂದು ಅಥವಾ ಎರಡು ದಿನಕ್ಕೆ ಸಾಕಾಗುವಷ್ಟು ಗೋಧಿಯನ್ನು ಬಿಡುಗಡೆಗೆ ಕ್ರಮವಹಿಸುವುದು.
- ಬೇಡಿಕೆ ಮತ್ತು ಬಳಕೆ ಪ್ರಮಾಣ ಪತ್ರಗಳನ್ನು ಪ್ರಸ್ತುತ ಅಕ್ಕಿ ವಿವರಗಳನ್ನು ಸಲ್ಲಿಸುತ್ತಿರುವ ಪದ್ಧತಿಯನ್ನು ಅನುಸರಿಸುವುದು.
- ಗೋದಿಯನ್ನು ಹಿಟ್ಟು/ರವೆ ಇತ್ಯಾದಿಗಳನ್ನು ಮಾಡಲು ತಗಲುವ ವೆಚ್ಚಗಳನ್ನು ಮಧ್ಯಾಹ್ನ ಉಪಹಾರ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದಲ್ಲಿ ಭರಿಸುವುದು.

ಅನುಷ್ಠಾನ/ಜವಾಬ್ದಾರಿ :

- ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಶಿಕ್ಷಣ ಇಲಾಖೆಯವರು ಅನುಷ್ಠಾನದ ಸಂಪೂರ್ಣ ಜವಾಬ್ದಾರಿಯನ್ನು ವಹಿಸುವುದು.
- ಗೋದಿ ಬಳಕೆ ಸಂಬಂಧ ಶಾಲಾ ಮಕ್ಕಳಿಗೆ ಸ್ಥಳೀಯ ಆಹಾರ ಪದ್ಧತಿಯನ್ವಯ ಚಪಾತಿ/ರೊಟ್ಟಿ/ಪೂರಿ/ಉಪ್ಪಿಟ್ಟು/ಪಾಯಸವನ್ನು ಯಾವ ಯಾವ ದಿನಗಳಂದು ಮಾಡಬೇಕು ಎಂಬುದರ ಬಗ್ಗೆ ಸೂಕ್ತ ಆದೇಶವನ್ನು ಸ್ಥಳೀಯ ಜಿಲ್ಲಾ ಪಂಚಾಯತ್ ಮೂಲಕ ಅಗತ್ಯ ಆದೇಶಗಳನ್ನು ಹೊರಡಿಸುವುದು.
- ಗೋದಿಯನ್ನು ಸ್ಥಳೀಯ ಆಹಾರ ಪದ್ಧತಿಯನ್ವಯ ಹಿಟ್ಟಾಗಿ ಅಥವಾ ರವೆಯನ್ನಾಗಿ ಪರಿವರ್ತಿಸುವ ಜವಾಬ್ದಾರಿಯು ಆಯಾ ಶಾಲಾ ಮುಖ್ಯ ಶಿಕ್ಷಕರು, ಎಸ್.ಡಿ.ಎಂ.ಸಿ ಮತ್ತು ಅಡುಗೆ ಸಿಬ್ಬಂದಿಯವರದ್ದಾಗಿರುತ್ತದೆ.
- ಗೋದಿ ಮತ್ತು ಗೋದಿ ಉತ್ಪನ್ನಗಳನ್ನು ಗುಣಮಟ್ಟ ಹಾಳಾಗಂತೆ ಸಂರಕ್ಷಿಸುವ ಜವಾಬ್ದಾರಿಯು ಆಯಾ ಶಾಲಾ ಮುಖ್ಯ ಶಿಕ್ಷಕರದ್ದಾಗಿರುತ್ತದೆ.
- ಮಾಹೆಗೆ ಅಗತ್ಯವಿರುವ ಆಹಾರ ಧಾನ್ಯಗಳನ್ನು ಶಾಲೆಗಳ ಬೇಡಿಕೆಯನ್ವಯ ನಿಗದಿತ ಅವಧಿಯೊಳಗೆ ಸರಬರಾಜು ಮಾಡಿಸುವ ಜವಾಬ್ದಾರಿಯು ಆಯಾ ಜಿಲ್ಲೆ ಮತ್ತು ತಾಲ್ಲೂಕು ಹಂತದ ಮಧ್ಯಾಹ್ನ ಉಪಹಾರ ಯೋಜನೆಯ ನೋಡಲ್ ಅಧಿಕಾರಿಗಳದ್ದಾಗಿರುತ್ತದೆ.
- ಶಾಲಾ ಮುಖ್ಯ ಶಿಕ್ಷಕರು ಫಲಾನುಭವಿಗಳು ಮತ್ತು ಶಾಲೆ ನಡೆಯುವ ದಿನಗಳನ್ನಾಧರಿಸಿ ಗೋದಿಯ ಬೇಡಿಕೆ ಮತ್ತು ಬಳಕೆ ಪ್ರಮಾಣ ಪತ್ರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳವರಿಗೆ ಸಲ್ಲಿಸುವುದು.
- ತಾಲ್ಲೂಕು ಹಂತದಲ್ಲಿ ಶಾಲಾ ಹಂತದ ಬೇಡಿಕೆ ಮತ್ತು ಬಳಕೆ ಪ್ರಮಾಣ ಪತ್ರಗಳನ್ನು ಆಯಾ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳವರು ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರುಗಳಿಗೆ ಸಲ್ಲಿಸುವುದು.

➢ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಮಾಹೆಗೆ ಅಗತ್ಯವಿರುವ ಆಹಾರ ಧಾನ್ಯ ಬೇಡಿಕೆ ಮತ್ತು ಬಳಕೆ ಪ್ರಮಾಣ ಪತ್ರಗಳನ್ನು ಮಾಹೆವಾರು ನಿಗದಿತ ಅವಧಿಯೊಳಗೆ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸುವುದು.

➢ ಜಿಲ್ಲಾ ಪಂಚಾಯತ್ ನಿಂದ ಆಯಾ ಮಾಹೆವಾರು ರಾಜ್ಯ ಕಛೇರಿಗೆ ಬೇಡಿಕೆ ಮತ್ತು ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು.

**ಎಫ್.ಸಿ.ಐ ಮತ್ತು ಕೆ.ಎಫ್.ಸಿ.ಎಸ್.ಸಿ:**

➢ ಕಾರ್ಯಕ್ರಮಕ್ಕೆ ಅಗತ್ಯವಿರುವ ಗೋದಿಯನ್ನು ರಾಜ್ಯ ಕಛೇರಿಯ ಬೇಡಿಕೆಯನ್ವಯ ಜಿಲ್ಲಾವಾರು ದಾಸ್ತಾನನ್ನು ಒದಗಿಸುವುದು.

**ಪಾತ್ರೆ ಪರಿಕರ ಒದಗಣೆ :**

➢ ಶಾಲಾ ಹಂತದಲ್ಲಿ ಚಪಾತಿ/ರೊಟ್ಟಿ/ಪೂರಿ ತಯಾರಿಸಲು ಮಕ್ಕಳ ಸಂಖ್ಯೆಗಳಿಗನುಗುಣವಾಗಿ ಅಗತ್ಯವಿರುವ ಪಾತ್ರೆ ಪರಿಕರಗಳನ್ನು ಶಾಲೆಗಳಿಗೆ ಬಿಡುಗಡೆಯಾಗಿರುವ ಪಾತ್ರೆ ಪರಿಕರಗಳ ಅನುದಾನ, ಶಾಲಾ ಸಂಚಿತ ನಿಧಿ, ದಾನಿಗಳ ಸಹಕಾರ ಅಥವಾ ಅಕ್ಷರ ದಾಸೋಹ ಕಾರ್ಯಕ್ರಮದ ಖಾತೆಯಲ್ಲಿನ ಸಂಚಿತ ಮೊತ್ತಗಳಿಂದ ಖರೀದಿಸುವುದು.

**ಅನುದಾನ ಬಳಕೆ :**

➢ ಗೋದಿಗೆ ತಗಲುವ ವೆಚ್ಚಗಳನ್ನು ಮಧ್ಯಾಹ್ನ ಉಪಹಾರ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನಗಳಲ್ಲಿ ಭರಿಸುವುದು.

➢ ಗೋದಿಯನ್ನು ಗೋದಿ ಹಿಟ್ಟಾಗಿ/ರವೆಯನ್ನಾಗಿ ಪರಿವರ್ತಿಸಲು ತಗಲುವ ವೆಚ್ಚಗಳನ್ನು ಶಾಲೆಗೆ ಬಿಡುಗಡೆಯಾಗಿರುವ ಪರಿವರ್ತನಾ ವೆಚ್ಚಗಳಡಿ ಶಾಲಾ ಹಂತದಲ್ಲಿಯೇ ಭರಿಸುವುದು.

➢ ಚಪಾತಿ/ರೊಟ್ಟಿ ಮಾಡುವ ಸಂದರ್ಭದಲ್ಲಿ ತಗಲುವ ಹೆಚ್ಚುವರಿ ಅಡುಗೆ ಅನಿಲ ಸಿಲಿಂಡರ್ ವೆಚ್ಚಗಳನ್ನು ಅಕ್ಷರ ದಾಸೋಹ ಕಾರ್ಯಕ್ರಮದಡಿ ಅನಿಲ ಸಿಲಿಂಡರ್‌ಗಳಿಗೆ ಹೆಚ್ಚುವರಿಯಾಗಿ ಬಿಡುಗಡೆಯಾಗಿರುವ ಅನುದಾನದಡಿ ಭರಿಸುವುದು.

**ದಾಖಲೆಗಳ ನಿರ್ವಹಣೆ :**

➢ ಜಿಲ್ಲೆ ಮತ್ತು ತಾಲ್ಲೂಕು ಹಂತಗಳಲ್ಲಿ ಶಾಲೆಗಳಿಂದ ಸ್ವೀಕರಿಸಿದ ಬೇಡಿಕೆ ಮತ್ತು ಬಳಕೆ ಪ್ರಮಾಣ ಪತ್ರಗಳನ್ನು ನಿರ್ವಹಿಸಿರುವುದು.

➢ ಅನುದಾನ ಬಿಡುಗಡೆ ಸಂಬಂದಿಸಿದ ದಾಖಲೆಗಳನ್ನು ನಿರ್ವಹಿಸುವುದು.

➢ ಶಾಲಾ ಹಂತದಲ್ಲಿ ದಾಖಲೆಗಳ ನಿರ್ವಹಣೆ ಆಯಾ ಶಾಲಾ ಮುಖ್ಯ ಶಿಕ್ಷಕರು ಮತ್ತು ಮುಖ್ಯ ಅಡುಗೆಯವರದ್ದಾಗಿರುತ್ತದೆ.

➢ ಶಾಲಾ ಹಂತದ ಖರ್ಚುವೆಚ್ಚಗಳನ್ನು ಪ್ರತಿ ದಿನ ಮಧ್ಯಾಹ್ನ ಉಪಹಾರ ಯೋಜನೆಯ ನಗದು ವಹಿಯಲ್ಲಿ ನಿರ್ವಹಿಸುವುದು.

➢ ಪ್ರತಿ ಮಾಹೆಯಾನ ಖರ್ಚು ವೆಚ್ಚಗಳ ವಿವರಗಳನ್ನು ಆಯಾ ಮಹೆಯ ಎಸ್.ಡಿ.ಎಂ.ಸಿ ಸಭೆಗಳಲ್ಲಿ ಚರ್ಚಿಸಿ ಅನುಮೋದನೆ ಪಡೆಯುವುದು.

**ಆಹಾರ ಸೂಚಿತ ಪಟ್ಟಿ (ಮೆನು) :**

➢ ಪ್ರಸ್ತುತ ನಿಗದಿಪಡಿಸಿರುವ ಆಹಾರ ಸೂಚಿತ ಪಟ್ಟಿಯಲ್ಲಿ ಸ್ಥಳೀಯ ಆಹಾರ ಪದ್ಧತಿಯನ್ವಯ ಮಕ್ಕಳ ಅಭಿಪ್ರಾಯದಂತೆ ಧಾನ್ಯದ ದಾಸ್ತಾನಿನನ್ವಯ ವಾರಕ್ಕೆ ಒಂದು ದಿನ ಅಥವಾ ಎರಡು ದಿನ ಗೋದಿಯಿಂದ ತಯಾರಿಸಿದ ಚಪಾತಿ/ರೊಟ್ಟಿ/ಪೂರಿ/ಉಪ್ಪಿಟ್ಟು/ಪಾಯಸ ಗಳನ್ನು ಸ್ಥಳೀಯವಾಗಿ ಎಸ್.ಡಿ.ಎಂ.ಸಿ ನ ತೀರ್ಮಾನದಂತೆ ಆಹಾರ ಸೂಚಿತ ಪಟ್ಟಿಯನ್ನು ಶಾಲೆಯಲ್ಲಿ ಪ್ರಕಟಿಸಿ ಅನುಸರಿಸುವುದು.

➢ ಚಪಾತಿ ಅಥವಾ ರೋಟಿಯನ್ನು ಮಾಡಿದ ದಿನ ಅನ್ನವನ್ನೂ ಸಹ ಮಾಡಲು ಅವಕಾಶ ಕಲ್ಪಿಸಿದೆ. ಆದರೆ ಅಕ್ಕಿ ಮತ್ತು ಗೋದಿಯನ್ನು ನಿಗದಿಪಡಿಸಿರುವ ಪ್ರಮಾಣದಲ್ಲಿ ಅಂದರೆ ಎರಡೂ ಧಾನ್ಯ ಸೇರಿ ಒಟ್ಟಾರೆ 1-5 ನೇ ತರಗತಿಗೆ 100 ಗ್ರಾಂ, 6-8/9&10ನೇ ತರಗತಿಗಳಿಗೆ 150 ಗ್ರಾಂನಂತೆ ಬಳಕೆ ಮಾಡುವುದು.

➢ ಸ್ಥಳೀಯವಾಗಿ ಶಾಲಾ ಹಂತದಲ್ಲಿ ಅನುಸರಿಸುವ ಮೆನು/ಪದ್ದತಿಯನ್ನು ತಾಲ್ಲೂಕು ಮತ್ತು ಜಿಲ್ಲಾ ಕಛೇರಿಗಳಿಗೆ ಮಾಹಿತಿ ನೀಡುವುದು.

**ತರಬೇತಿ:**

➢ ಮಧ್ಯಾಹ್ನ ಉಪಹಾರ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗೆ ನೀಡುವ ತರಬೇತಿಗಳಲ್ಲಿ ಗೋದಿ ಬಳಕೆ ಮಾಡುವ ಬಗ್ಗೆ ಅಗತ್ಯ ತರಬೇತಿಯನ್ನು ನೀಡಲು ಕ್ರಮವಹಿಸುವುದು.

**ಸ್ವಯಂ ಸೇವಾ ಸಂಸ್ಥೆಗಳ ಪಾತ್ರ :**

- ಮಧ್ಯಾಹ್ನ ಉಪಹಾರ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳವರಿಗೆ ಪ್ರಸ್ತುತ ನೀಡುತ್ತಿರುವ ಅಡುಗೆ ತಯಾರಿಕಾ ವೆಚ್ಚಗಳಲ್ಲಿಯೇ ಶಾಲೆಗಳಿಗೆ ಗೋದಿಯಿಂದ ತಯಾರಿಸಿದ ಆಹಾರ ಪದಾರ್ಥಗಳನ್ನು ಸಿದ್ಧಪಡಿಸಿ ಸರಬರಾಜು ಮಾಡುವುದು.
- ಮುಂಚಿತವಾಗಿ ಆಹಾರ ಸಿದ್ಧಪಡಿಸಿ ಆಹಾರ ಕೆಡದಂತೆ Pricervative ಗಳನ್ನು ಬಳಸುವಂತಿಲ್ಲ. ಈ ಹಿನ್ನೆಲೆಯಲ್ಲಿಯೇ ಯಾವುದೇ ಅಡುಗೆ ಕೇಂದ್ರ ಕೇಂದ್ರೀಕರಿಸಿ ಗರಿಷ್ಠ 20 ಕಿ.ಮಿ ವ್ಯಾಪ್ತಿಯೊಳಗೆಯೇ ಆಹಾರವನ್ನು ಸರಬರಾಜು ಮಾಡುವುದು.
- 20 ಕಿ.ಮೀಗಿಂತ ಹೆಚ್ಚಿನ ಅಂತರಕ್ಕೆ ಸಿದ್ಧಪಡಿಸಿದ ಆಹಾರವನ್ನು ಸರಬರಾಜು ಮಾಡುತ್ತಿದ್ದಲ್ಲಿ ಕಡ್ಡಾಯವಾಗಿ ಉಪ ಅಡುಗೆ ಕೇಂದ್ರಗಳನ್ನು ತೆರೆಯುವುದು.
- ಮಕ್ಕಳು ಇಷ್ಟಪಡುವ ಮತ್ತು ಸ್ಥಳೀಯ ಆಹಾರ ಪದ್ಧತಿಯನ್ವಯವೇ ಗೋದಿಯಿಂದ ತಯಾರಿಸಿದ ಚಪಾತಿ/ರೊಟ್ಟಿ/ಪೂರಿ/ಉಪ್ಪಿಟ್ಟು/ಪಾಯಸವನ್ನು ಶಾಲೆಗಳಿಗೆ ಸರಬರಾಜು ಮಾಡುವುದು.
- ಚಪಾತಿ/ರೊಟ್ಟಿ/ಪೂರಿಗೆ ಅಗತ್ಯವಿರುವ ಪಲ್ಯ/ಸಬ್ಜಿ/ದಾಲ್‌ನ್ನು ಸ್ಥಳೀಯ ಆಹಾರ ಪದ್ಧತಿಯನ್ವಯವೇ ತರಕಾರಿಗಳನ್ನು ಮತ್ತು ಮಸಾಲೆಗಳನ್ನು ನಿಗದಿತ ಪ್ರಮಾಣದಲ್ಲಿ ಬಳಸಿ ಆಹಾರವನ್ನು ಸಿದ್ಧಪಡಿಸಿ ಸಕಾಲದಲ್ಲಿ ಶಾಲೆಗಳಿಗೆ ಸರಬರಾಜು ಮಾಡುವುದು.
- ಸ್ಥಳೀಯ ಜಿಲ್ಲಾ ಪಂಚಾಯತ್ ವತಿಯಿಂದ ಯಾವ ದಿನಗಳಂದು ಯಾವ ಪದಾರ್ಥವನ್ನು ಮಕ್ಕಳಿಗೆ ನೀಡಬೇಕು ಎಂಬುದರ ಬಗ್ಗೆ ಮೆನು ನಿಗದಿಪಡಿಸುತ್ತದೆಯೋ ಅದೇ ರೀತಿ ಮಕ್ಕಳಿಗೆ ಆಹಾರ ಸರಬರಾಜು ಮಾಡತಕ್ಕದ್ದು.

ಮೇಲ್ಕಂಡಂತೆ ಗೋದಿ ಬಳಕೆಯನ್ನು **ದಿನಾಂಕ : 01-11-2013** ರಿಂದ ಕಡ್ಡಾಯವಾಗಿ ಜಾರಿಗೆ ಬರುವಂತೆ ಕ್ರಮ ಕೈಗೊಳ್ಳಲು ಆದೇಶಿಸಿದೆ.

(ಮೊಹಮ್ಮದ್ ಮೊಹಿಸಿನ್)
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ.**

ಪ್ರತಿಯನ್ನು :

1. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಹಾಗು ಮುಂದಿನ ಕ್ರಮಕ್ಕಾಗಿ,
2. ರಾಜ್ಯದ ಎಲ್ಲಾ ಜಿಲ್ಲೆಗಳ, ಶಿಕ್ಷಣಾಧಿಕಾರಿಗಳು(ಅದಾ), ಜಿಲ್ಲಾ ಪಂಚಾಯತ್ ಕಛೇರಿಗಳವರಿಗೆ ಅಗತ್ಯ ಕ್ರಮಕ್ಕಾಗಿ,
3. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ)/ಅಭಿವೃದ್ಧಿ, ಸಾರ್ವಜನಿಕ ಶಿಕ್ಷಣ ಇಲಾಖೆ, ರವರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ,
4. ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರು(ಅದಾ), ತಾಲ್ಲೂಕು ಪಂಚಾಯತ್ ಕಛೇರಿ ರವರಿಗೆ ಮುಂದಿನ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ.
7. ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ರಾಜ್ಯದ ಎಲ್ಲಾ ಜಿಲ್ಲೆಗಳ ಸ್ವಯಂ ಸೇವಾ ಸಂಸ್ಥೆಗಳಿಗೆ(ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ರವರ ಮುಖಾಂತರ).
8. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಮದರಸಾ, ಸ್ಥಳೀಯ ಸಂಸ್ಥೆಗಳು, ಎನ್.ಸಿ.ಎಲ್.ಪಿ ಶಾಲೆಗಳ ಮುಖ್ಯ ಶಿಕ್ಷಕರುಗಳಿಗೆ ಮುಂದಿನ ಕ್ರಮ್ಕಕಾಗಿ. (ಸಂಬಂಧಿಸಿದ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ).
9. ಕಛೇರಿ ಪ್ರತಿ.